## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 268(199) |
| ಸದಸ್ಯರ ಹೆಸರು | : | ಶ್ರೀ ಯು.ಬಿ.ವೆಂಕಟೇಶ್<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 17.02.2022 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ದ್ವಿ ಚಕ್ರ ವಾಹನ ಸವಾರರು ಕಡ್ಡಾಯವಾಗಿ ಶಿರಸ್ತ್ರಾಣ (ಹೆಲ್ಮೆಟ್)ವನ್ನು ಧರಿಸಬೇಕೆಂಬ ಕಾನೂನನ್ನು ಜಾರಿಗೆ ತರಲಾಗಿದೆಯೇ ; | ಜಾರಿಗೆ ತರಲಾಗಿದೆ. |
| (ಆ) | ಹಾಗಿದ್ದಲ್ಲಿ, ಯಾವ ದಿನಾಂಕದಿಂದ ಜಾರಿಗೆ ತರಲಾಗಿದೆ ; | ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 278 ಎಸ್‌ಎಸ್‌ಟಿ 2004, ದಿನಾಂಕ:29.06.2006 ರಲ್ಲಿ ಜಾರಿಗೆ ತರಲಾಗಿದೆ. |
| (ಇ) | ಕಾನೂನಿನಲ್ಲಿ ಯಾವ ವಿನ್ಯಾಸದ ಶಿರಸ್ತ್ರಾಣವನ್ನು ಧರಿಸಬೇಕೆಂಬ ನಿಯಮವನ್ನು ವಿಧಿಸಲಾಗಿದೆ ; (ಸಂಪೂರ್ಣ ವಿವರವನ್ನು ಒದಗಿಸುವುದು) ; | ಶಿರಸ್ತ್ರಾಣವನ್ನು ಧರಿಸುವ ಕುರಿತು ಇರುವ ನಿಯಮಗಳು ಈ ಕೆಳಕಂಡಂತಿವೆ.<br>ಕಲಂ 129 ಭಾರತೀಯ ಮೋಟಾರು ವಾಹನ ಕಾಯ್ದೆ 1988 – ಕರ್ನಾಟಕ ಮೋಟಾರು ವಾಹನ ಕಾಯ್ದೆ 1989 ನಿಯಮ 230(1) – ಹೆಲ್ಮೆಟ್ ಧರಿಸುವ ಬಗ್ಗೆ.<br>**<u>ಕಲಂ 129 ಭಾರತೀಯ ಮೋಟಾರು ವಾಹನ (ತಿದ್ದುಪಡಿ) ಕಾಯ್ದೆ 2019</u>**<br>ಪ್ರತಿಯೊಬ್ಬ ವ್ಯಕ್ತಿಯೂ ಸಾರ್ವಜನಿಕ ರಸ್ತೆಯಲ್ಲಿ ಮೋಟಾರು ಸೈಕಲ್ ಚಾಲನೆ ಮಾಡುವಾಗ ಅಥವಾ ಹಿಂಬದಿಯ ಸವಾರನಾಗಿ ಪ್ರಯಾಣಿಸುತ್ತಿರುವಾಗ 4 ವರ್ಷಕ್ಕಿಂತ ಹೆಚ್ಚಿನ ವಯೋಮಾನದವರು ಕಡ್ಡಾಯವಾಗಿ ಹೆಲ್ಮೆಟ್ ಧರಿಸತಕ್ಕದ್ದು. (ಹೆಲ್ಮೆಟ್ ಭಾರತೀಯ ಮಾನಕ ಸಂಸ್ಥೆ ನಿರ್ಧರಿಸಿರುವ ಗುಣಮಟ್ಟದ್ದಾಗಿರಬೇಕು). ಜೊತೆಗೆ ಧರಿಸುವ ಹೆಲ್ಮೆಟ್<br>1. ಆಕೃತಿ, ಉಪಯೋಗಿಸಲ್ಪಟ್ಟ ವಸ್ತು ಮತ್ತು ರಚನೆಯಿಂದ ಯಾವುದೇ ಅಪಘಾತ ಉಂಟಾದಲ್ಲಿ ಸವಾರ ಮತ್ತು ಹಿಂಬದಿ ಸವಾರನಿಗೆ ಸಾಕಷ್ಟು ರಕ್ಷಣೆ ನೀಡುವಂತಿರಬೇಕು.<br>2. ಹೆಲ್ಮೆಟ್ ಅನ್ನು ಶಿರದಲ್ಲಿ ಸರಿಯಾಗಿ ಕುಳಿತಿರುವಂತೆ ರಚಿಸಲಾಗಿರುವ ಸ್ಟ್ರಾಪ್‌ಗಳನ್ನು ಬಿಗಿಯಾಗಿ ಹಾಕಬೇಕು. |

**<u>ಬೆಂಗಳೂರು ನಗರದಲ್ಲಿ ಕಳೆದ 3 ವರ್ಷಗಳಲ್ಲಿ ದ್ವಿ ಚಕ್ರ ವಾಹನ ಸವಾರರು ಅಪಘಾತಕ್ಕೀಡಾಗಿ ಉಂಟಾದ ಸಾವು-ನೋವುಗಳ ವಿವರಗಳು ಈ ಕೆಳಕಂಡಂತೆ ಇರುತ್ತವೆ.</u>**

| ಹೆಲ್ಮೆಟ್ ಧರಿಸದೆ ಸಂಭವಿಸಿದ ರಸ್ತೆ ಅಪಘಾತಗಳು | | | | | | |
|---|---|---|---|---|---|---|
| ವಿವರ | ಸವಾರರು | | | ಹಿಂಬದಿ ಸವಾರರು | | |
| | 2019 | 2020 | 2021 | 2019 | 2020 | 2021 |
| ಮಾರಣಾಂತಿಕ ಪ್ರಕರಣಗಳು | 138 | 72 | 84 | 19 | 31 | 29 |
| ಮೃತರು | 138 | 72 | 84 | 27 | 36 | 31 |
| ಮಾರಣಾಂತಿಕವಲ್ಲದ ಪ್ರಕರಣಗಳು | 161 | 150 | 106 | 42 | 26 | 34 |
| ಗಾಯಾಳುಗಳು | 176 | 158 | 123 | 120 | 77 | 53 |

ಹೆಲ್ಮೆಟ್ ಧರಿಸದೆ ಸಂಚರಿಸುವ ಎಲ್ಲಾ ವಾಹನ ಸವಾರರ ವಿರುದ್ಧ ಮೋಟಾರು ವಾಹನಗಳ ಕಾಯ್ದೆ 1988ರ ಕಲಂ 194-ಡಿ ರನ್ವಯ ಪ್ರಕರಣಗಳನ್ನು ದಾಖಲಿಸಿ ದಂಡ ವಸೂಲಾತಿಯೊಂದಿಗೆ ಕಾನೂನು ಕಡ್ಡಾಯಗೊಳಿಸಿದಂತೆ ವಾಹನ ಸವಾರರ ಚಾಲನಾ ಪರವಾನಿಗೆಗಳನ್ನು ಪಡೆದು ಅಮಾನತ್ತು ಪಡಿಸಲು ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಕಛೇರಿಗಳಿಗೆ ಕಳುಹಿಸಿಕೊಡಲು ಸಂಚಾರ ಪೊಲೀಸ್ ಠಾಣೆಗಳ ಎಲ್ಲಾ ಪಿ.ಐ. ರವರುಗಳಿಗೆ ನಿರ್ದೇಶನಗಳನ್ನು ನೀಡಲಾಗಿದೆ.

ಹೆಲ್ಮೆಟ್ ಧರಿಸದೆ ವಾಹನ ಚಾಲನೆ ಮಾಡುತ್ತಿರುವವರ ವಿರುದ್ಧ ಕಾನೂನಿನ್ವಯ ಸಂಚಾರ ಪೊಲೀಸ್ ಅಧಿಕಾರಿಗಳು ಉಲ್ಲಂಘನೆಗಳನ್ನು ದಾಖಲಿಸಿ ಕ್ರಮ ಕೈಗೊಳ್ಳುತ್ತಿದ್ದು, ಆಫ್ ಹೆಲ್ಮೆಟ್ ಅಥವಾ ಕ್ಯಾಪ್ ಹೆಲ್ಮೆಟ್ ಮುಂತಾದ ಐ.ಎಸ್.ಐ ಗುಣಮಟ್ಟ ಹೊಂದಿರದ ಹೆಲ್ಮೆಟ್ ಧರಿಸುವ ದ್ವಿ ಚಕ್ರ ವಾಹನ ಸವಾರರಿಗೆ ತಿಳುವಳಿಕೆ/ಜಾಗೃತಿ ಅಭಿಯಾನವನ್ನು ಕೈಗೊಳ್ಳಲಾಗಿದೆ. ದ್ವಿ ಚಕ್ರ ವಾಹನ ಸವಾರರಿಗೆ ಯಾವುದೇ ರೀತಿಯ ತೊಂದರೆ ನೀಡುತ್ತಿಲ್ಲ. ಸಂಚಾರ ಪೊಲೀಸರು ಜಾರಿಯಲ್ಲಿರುವ ಕಾನೂನಿನ್ವಯವೇ ಕ್ರಮ ಕೈಗೊಳ್ಳುತ್ತಿದ್ದು, ರಸ್ತೆ ಅಪಘಾತಗಳಲ್ಲಿ ಸಂಭವಿಸುವ ಸಾವುಗಳನ್ನು ತಡೆಗಟ್ಟುವ ದೃಷ್ಟಿಯಿಂದ ಮತ್ತು ರಸ್ತೆ ಸುರಕ್ಷತೆ ದೃಷ್ಟಿಯಿಂದ ಕ್ರಮ ಕೈಗೊಳ್ಳುತ್ತಿದ್ದಾರೆ.

**ಹೆಚ್‌ಡಿ 39 ಎಸ್‌ಎಸ್‌ಟಿ 2022**

(ಆರಗ ಜ್ಞಾನೇಂದ್ರ)
ಗೃಹ ಸಚಿವರು